BKN-02

Sl.No. : **Total No. of Pages : 3**

ದ್ವಿತೀಯ ವರ್ಷದ ಬಿ.ಕಾಂ. ವಾರ್ಷಿಕ/ಪೂರಕ ಪರೀಕ್ಷೆ, ಸೆಪ್ಟೆಂಬರ್/ಅಕ್ಟೋಬರ್ - 2023

(SLM Scheme)

ಕನ್ನಡ ಭಾಷೆ (ಪತ್ರಿಕೆ–೨)

ಸವಿಸ್ತರ ಮತ್ತು ಅವಿಸ್ತರ ಪಠ್ಯಗಳು

(ಪ್ರಾಚೀನ ಕನ್ನಡ ಕಾವ್ಯ, ಸಣ್ಣ ಕತೆಗಳು, ವ್ಯವಹಾರಿಕ ಕನ್ನಡ)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳು ಕಡ್ಡಾಯ.*

ವಿಭಾಗ–ಎ

(ಪ್ರಾಚೀನ ಕನ್ನಡ ಕಾವ್ಯ : 20 ಅಂಕಗಳು)

ಪ್ರ1) ಒಂದರ ಭಾವವನ್ನು ಸಂದರ್ಭಸಹಿತ ವಿವರಿಸಿ: **[1×5=5]**

೧) ಕಡುಮುಳಿದು, ನಿನ್ನ ತೊಡೆಗಳ
ನ್, ಉಡಿವೆಡೆಯೊಳ್, ಭೀಮಸೇನನ್, ಆಪದದೊಳ್
ಪಿಡಿಯಲ್ಕೆಂದಿರ್ದೆನ್, ಇದಂ
ಪಿಡಿಯೆಂ, ಪೋಗೆಂದು, ಸಭೆಯೊಳ್, ಹೂಡಿದಂ ಬಿಲ್ಲಂ

೨) ವ್ಯಾಧನೊಂದು ಮೊಲನ ತಂದಡೆ ಸಲುವ ಹಾಗಕ್ಕೆ ಬಿಲಿವರಯ್ಯಾ!
ನೆಲನಾಳವನ ಹೆಣನೆಂದಡೆ ಒಂದಡಿಕೆಗೆ ಕೊಂಬವರಿಲ್ಲ ನೋಡಯ್ಯಾ!
ಮೊಲನಿಂದ ಕರಕಷ್ಟ ನರನ ಬಾಳುವೆ!
ಸಲೆ ನಂಬೊ ನಮ್ಮ ಕೂಡಲಸಂಗಮದೇವನ

ಪ್ರ2) ಹತ್ತು ಪದಗಳಿಗೆ ಅರ್ಥ ಬರೆಯಿರಿ: **[10×½=5]**

ನನ್ನ, ಅಲಂಪು, ಕುರಂಗ, ಹುಸಿ, ರಜ, ಜಲಧಿ, ಅಂಬು, ಅರ್ಕ, ಬೆಂತರ, ಕಟಕ, ಅನಲ, ರಿಪು, ಅಡಗು, ಎವೆ.

ಪ್ರ3) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ: **[2×2½=5]**

೧) ನರಸುತ ನಿನ್ನೊರೆಗೆ ದೊರೆಗೆ ಗಂಡರುಮೊಳರೇ
೨) ಆ ದೇವಿಗೆನ್ನನಿಕ್ಕಿಯುಮೀ ದುರಿತಮನಿಂದ ಮಗನೆ ಪರಿಹರಿಸದಿರೆಂ
೩) ಇನ್ನೇಕೆ ದೇಹದಭಿಲಾಷೆ ಚಿಃ ತೆಗೆ
೪) ಅಕಟಾ ಕೋಪ ಗರ್ವಗಳಾರ ಕೆಡಿಸವು

ಪ್ರ4) <u>ಒಂದು</u> ವಿಷಯಕ್ಕೆ ಟಿಪ್ಪಣಿ ಬರೆಯಿರಿ: **[1×5=5]**

೧) ಯಶೋಧರ ಚರಿತೆಯಲ್ಲಿ ಅಮೃತಮತಿಯ ಪ್ರಸಂಗ.

೨) ಧನುವನ್ನು ಕಳೆದುಕೊಂಡ ಅಭಿಮನ್ಯುವಿನ ಯುದ್ಧದ ಸನ್ನಿವೇಶ.

<u>ವಿಭಾಗ–ಬಿ</u>

(ಪ್ರಾಚೀನ ಕನ್ನಡ ಕಾವ್ಯ, ಸಣ್ಣ ಕತೆಗಳು : 30 ಅಂಕಗಳು)

ಪ್ರ5) <u>ಒಂದು</u> ಪ್ರಶ್ನೆಗೆ ಉತ್ತರಿಸಿ: **[1×10=10]**

೧) ದುರ್ಯೋಧನ ವಿಲಾಪ–ಗದಾಯುದ್ಧದಲ್ಲಿ ಹೇಗೆ ಮೂಡಿ ಬಂದಿದೆ? ಚರ್ಚಿಸಿ.

೨) ಭರತ–ಬಾಹುಬಲಿಯರ ಯುದ್ಧ ಪ್ರಸಂಗದ ವೈಶಿಷ್ಟ್ಯತೆ ಹೇಗೆ ನಿರೂಪಿತಗೊಂಡಿದೆ? ವಿಶ್ಲೇಷಿಸಿ.

ಪ್ರ6) <u>ಎರಡು</u> ಪ್ರಶ್ನೆಗಳಿಗೆ ಉತ್ತರಿಸಿ: **[2×10=20]**

೧) 'ಧನ್ವಂತರಿಯ ಚಿಕಿತ್ಸೆ' ಕತೆಯಲ್ಲಿ ರೈತರ ಬದುಕಿನ ಶೋಷಿತ ಚಿತ್ರಣ ಹೇಗೆ ವ್ಯಕ್ತವಾಗಿದೆ? ಚರ್ಚಿಸಿ.

೨) ಮನುವಿನ ರಾಣಿ ಯಾರು? ರಾಜಮ್ಮನಿಗೆ 'ರಾಣಿ' ಎಂಬ ಹೆಸರು ಬಂದಿರುವುದರ ಸಾರ್ಥಕತೆ ಏನು? ವಿವರಿಸಿ.

೩) ಹಸಿವಿನ ಸಮಸ್ಯೆ 'ರೊಟ್ಟಿ' ಕಥೆಯಲ್ಲಿ ಹೇಗೆ ಚಿತ್ರಣಗೊಂಡಿದೆ? ವಿಶ್ಲೇಷಿಸಿ.

೪) ಮೂಡಿಗೆರೆಯ ಜನತೆಗೆ ಕೃಷ್ಣೇಗೌಡನ ಆನೆಯಿಂದ ಆಗುತ್ತಿದ್ದ ತೊಂದರೆಗಳು ಯಾವುವು? ವಿಷದಪಡಿಸಿ.

ವಿಭಾಗ–ಸಿ

(ವ್ಯಾವಹಾರಿಕ ಕನ್ನಡ : 30 ಅಂಕಗಳು)

ಪ್ರ7) ಎರಡು ಪ್ರಶ್ನೆಗಳಿಗೆ ಉತ್ತರಿಸಿ: **[2×10=20]**

೧) ವಾಣಿಜ್ಯ ಕನ್ನಡದ ಸ್ವರೂಪ, ಲಕ್ಷಣಗಳನ್ನು ಕುರಿತು ವಿವರಿಸಿ.

೨) ಆದೇಶ ಪತ್ರ ಎಂದರೇನು? ಪ್ರಮುಖ ಅಂಶಗಳಾವುವು? ಮಾದರಿ ಪತ್ರವೊಂದನ್ನು ರಚಿಸಿ.

೩) ಆಕ್ಷೇಪಣಾ ಪತ್ರ ಎಂದರೇನು? ಬರೆಯುವ ಸಂದರ್ಭಗಳಾವುವು? ಮಾದರಿ ಪತ್ರವೊಂದನ್ನು ರಚಿಸಿ.

೪) ಹುದ್ದೆಗಳ ಜಾಹೀರಾತು ಎಂದರೇನು? ಜಾಹೀರಾತು ಒಳಗೊಂಡಿರುವ ಅಂಶಗಳಾವುವು? ವಿವರಿಸಿ.

ಪ್ರ8) ಎರಡು ವಿಷಯಕ್ಕೆ ಟಿಪ್ಪಣಿ ಬರೆಯಿರಿ: **[2×5=10]**

೧) ಪರಿಚಯ ಪತ್ರಗಳು

೨) ಮಾರಾಟ ಪತ್ರಗಳು

೩) ಬ್ಯಾಂಕ್ ವ್ಯವಹಾರ ಪತ್ರಗಳು

೪) ಏಕವ್ಯಕ್ತಿ ವರದಿ

